**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 8/2014**

**ದೋ.ಸಾ. : 6 ಫ್ರಾ.ಸಾ. : 4**

| | |
|---|---|
| ಸಾಕ್ಷಿಯ ಹೆಸರು | : ಬಿ. ತಿಪ್ಪೆರುದ್ರಸ್ವಾಮಿ ದಳವಾಯಿ |
| ತಂದೆಯ ಹೆಸರು | : ಟಿ. ಬಸವರಾಜಪ್ಪ |
| ವಯಸ್ಸು | : 45 ವರ್ಷ |
| ಉದ್ಯೋಗ | : ಪ್ರ.ದ.ಸ. ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ , ಶಾಲಾ ಶಿಕ್ಷಣ ಇಲಾಖೆ ಹಿರಿಯೂರು |
| ವಾಸ | : ಹಿರಿಯೂರು |

**ದಿನಾಂಕಃ 10-08-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು 2009 ರಿಂದ 2017 ರವರೆಗೆ ಉಡುಪಿಯ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯಲ್ಲಿ ಪ್ರ.ದ.ಸ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ 03.05.2010 ರಂದು ನಾನು ಕಚೇರಿಯಲ್ಲಿದ್ದಾಗ ನನ್ನ ಮೇಲಾಧಿಕಾರಿಯವರು ಲೋಕಾಯುಕ್ತ ಪೊಲೀಸ್ ನವರಿಂದ ಪತ್ರ ಬಂದಿರುವುದಾಗಿ ನಾನು ಪಂಚನಾಗಿ ಅವರ ಮುಂದೆ ಹೋಗಿ ಹಾಜರಾಗಬೇಕು ಎಂದು ನಿರ್ದೇಶನ ನೀಡಿದರು. ನನ್ನ ಕಚೇರಿಯ ಚಾಸಾ-7 ರವರಿಗೆ ಸಹ ಆ ರೀತಿ ಹಾಜರಾಗುವಂತೆ ನಿರ್ದೇಶನ ನೀಡಿದರು . ನಾವಿಬ್ಬರು ಅದೇ ದಿನ ಮಧ್ಯಾಹ್ನ 3.30 ಗಂಟೆಗೆ ಉಡುಪಿಯ ಲೋಕಾಯುಕ್ತ ಕಚೇರಿಗೆ ಹೋಗಿ ಲೋಕಾಯುಕ್ತ ಅಧಿಕಾರಿ ಮುಂದೆ ಹಾಜರಾದೆವು . ಅಲ್ಲಿ ಉಡುಪಿ ಲೋಕಾಯುಕ್ತ ಆರಕ್ಷಕ ಉಪಾಧೀಕ್ಷಕರು ಇದ್ದರು . ಅವರು ಲಂಚ ನಿರೋಧಕ ಕಾಯ್ದೆ ಪ್ರಕರಣದಲ್ಲಿ ಮೈಸೂರಿನಲ್ಲಿ ಲೋಕಾಯುಕ್ತ ಆರಕ್ಷಕ ಅಧೀಕ್ಷಕರು ಪಂಚರನ್ನು ಕರೆತರಲು ಸೂಚನೆ ನೀಡಿದ್ದಾರೆ . ಆದ್ದರಿಂದ ನಿಮ್ಮನ್ನು ಕರೆಯಿಸಿದ್ದೇವೆ ಎಂದು ಹೇಳಿದರು . ಆ ವೇಳೆಗೆ ಚಾಮರಾಜನಗರ ಲೋಕಾಯುಕ್ತ ಆರಕ್ಷಕ ನಿರೀಕ್ಷಕರು ಡಿ. ಜಯರಾಮರವರು ಇದ್ದರು ಅವರನ್ನು ನಮಗೆ ಪರಿಚಯ ಮಾಡಿಕೊಟ್ಟರು . ಅವರು ಮೈಸೂರಿನ ಜಿಲ್ಲಾ ಸತ್ರ ನ್ಯಾಯಾಲಯದಲ್ಲಿ ನೀಡಿರುವ ಶೋಧನಾ ವಾರೆಂಟನ್ನು ತೋರಿಸಿದರು. ನಮಗೆ ಪಂಚರಾಗಿ ಬರಬೇಕು ಎಂದು ತಿಳಿಸಿದರು. ಆ ದಿನ ಲೋಕಾಯುಕ್ತ ಇಲಾಖಾ ವಾಹನದಲ್ಲಿ ನಮ್ಮನ್ನು ಕರೆದುಕೊಂಡು ಮುರ್ಡೇಶ್ವರಕ್ಕೆ ಬಂದು ಅಲ್ಲಿ ಸಮ್ಮರ್ ಬ್ರಿಡ್ಜ್

ಇನ್ ಎಂಬ ಲಾಡ್ಜ್‌ನಲ್ಲಿ ತಂಗಿದೆವು . ಅಲ್ಲಿ ರಾತ್ರಿ 9.00 ಗಂಟೆಗೆ ತಲುಪಿದೆವು . ಮಾರನೇ ದಿನ ಬೆಳಿಗ್ಗೆ ಸುಮಾರು 5.00 ಗಂಟೆಗೆ ಅಲ್ಲಿಂದ ನಾವೆಲ್ಲಾ ಬಿಟ್ಟೆವು . ಹೊನ್ನಾವರ ಮಾರ್ಗವಾಗಿ ಅಂಕೋಲಾ ಪಟ್ಟಣಕ್ಕೆ ಬಂದೆವು . ಅಂಕೋಲಾದಲ್ಲಿ ಆರೋಪಿ ಮನೆ ಮುಂದೆ ಹೋಗಿ ನಮ್ಮ ವಾಹನ ನಿಂತಿತು . ಆರೋಪಿ ನರೇಂದ್ರ ದೋವಿಂದ್ರೆ ಹಿತ್ತಲಮಕ್ಕಿರವರ ಮನೆ ಸಂಖ್ಯೆ 95 . ಆ ಮನೆಗೆ ಮಾನಸಿ ಎಂಬ ಹೆಸರು ಇತ್ತು . ಆ ಮನೆಗೆ ನಾವು ಹೋದೆವು . ಅಲ್ಲಿ ಒಬ್ಬ ಮಹಿಳೆ ಇದ್ದಳು . ಆಕೆಗೆ ಆರಕ್ಷಕ ನಿರೀಕ್ಷಕರು ತಮ್ಮ ಪರಿಚಯ ಹೇಳಿದರು . ಅಲ್ಲಿಗೆ ಬಂದಿರುವ ಉದ್ದೇಶ ತಿಳಿಸಿ ಅವರ ಮನೆ ಶೋಧನೆ ಮಾಡಬೇಕಾಗಿದೆ ಎಂದು ಶೋಧನಾ ವಾರೆಂಟನ್ನು ತೋರಿಸಿದರು. ಆ ಮಹಿಳೆ ಆರೋಪಿಯ ಹೆಂಡತಿ ಆಗಿದ್ದಳು . ಆಕೆ ಹೆಸರು ಕಲಾ ನರೇಂದ್ರ ಆಗಿತ್ತು. ಆಕೆಯ ಮಗ ವೇದಾಂತ ಎನ್ನುವವನು ಸಹ ಹಾಜರು ಇದ್ದ . ಆಕೆಯ ಮಗಳು ಮನೆಯ ಒಳಗಡೆ ಇದ್ದಳು . ಆಕೆ ಹೆಸರು ವಿನಂತಿ . ನಾವು ಮೊದಲು ನಮ್ಮ ಅಂಗಶೋಧನೆಯನ್ನು ಮಾಡಿಕೊಂಡು ನಮ್ಮ ಬಳಿ ಯಾವುದೇ ತೊಂದರೆ ಆಗುವಂತಹ ವಸ್ತುಗಳು ಇಲ್ಲ ಎಂದು ಆರೋಪಿಯ ಮನೆಯವರಿಗೆ ಖಾತ್ರಿ ಪಡಿಸಿ ನಂತರ ಆರೋಪಿಯ ಪತ್ನಿ ಮತ್ತು ಮಕ್ಕಳ ಅಂಗಶೋಧನೆಯನ್ನು ಮಾಡಿದೆವು . ನಮ್ಮ ಜೊತೆ ಮಹಿಳಾ ಸಿಬ್ಬಂದಿ ಇದ್ದರು . ಅವರ ಹೆಸರು ಭಾರತಿ . ಆಕೆ ಸದರಿ ಮಹಿಳೆ ಮತ್ತು ಆಕೆಯ ಮಗಳ ಅಂಗಶೋಧನೆ ಮಾಡಿದಳು . ಮನೆಯಲ್ಲಿ ಬೇರೆ ಯಾರೂ ಇರಲಿಲ್ಲ. ಆರೋಪಿಯ ಸೋದರ ಮಾವ ಆ ಮನೆಯಲ್ಲಿ ಇರುತ್ತಾರೆ ಎಂದು ಆರೋಪಿ ಹೆಂಡತಿ ತಿಳಿಸಿದಳು . ಆದರೆ ಆ ಸಮಯದಲ್ಲಿ ಆರೋಪಿಯ ಸೋದರಮಾವ ಮನೆಯಲ್ಲಿ ಇರಲಿಲ್ಲ. ಆರೋಪಿಯ ಹೆಂಡತಿ ಅದೇ ಮನೆಯಲ್ಲಿ ಆಕೆ ಮತ್ತು ಆಕೆಯ ಗಂಡ ಮತ್ತು ಅವರ ಕುಟುಂಬ ಸಮೇತ 1993 ರಿಂದ 1999 ರವರೆಗೆ ವಾಸ ಇದ್ದರು ಮತ್ತು ಆರೋಪಿಗೆ ಮುಂಬಡ್ತಿ ಸಿಕ್ಕಿದ ನಂತರ ಬೇರೆ ಊರಿನಲ್ಲಿ ಹೋಗಿ ಸ್ವಲ್ಪ ಕಾಲ ಇದ್ದರು ಮತ್ತು ಪುನಃ ನಾವು ಭೇಟಿಕೊಟ್ಟ ದಿನದ ಒಂದುವರೆ ವರ್ಷ ಹಿಂದಿನಿಂದ ವಾಪಸ್ಸು ನಾವು ಭೇಟಿಕೊಟ್ಟ ಮನೆಗೆ ಬಂದು ವಾಸ ಇರುವುದಾಗಿ ತಿಳಿಸಿದರು . ಅವರ ಮನೆಯ ಮುಂಭಾಗದಲ್ಲಿ ಗೇಟ್ ಹೊರಗಡೆ ಒಂದು ಮಾರುತಿ 800 ಕಾರ್ ಇತ್ತು . ಅದು ಆರೋಪಿಗೆ ಸೇರಿತ್ತು . ಮನೆಯ ಆವರಣದೊಳಗೆ ಎರಡು ವಾಹನ ಇದ್ದವು . ಅವೂ ಸಹ ಕಾರುಗಳಾಗಿದ್ದವು . ಅವುಗಳಲ್ಲಿ ಒಂದು ಆರೋಪಿಯ ಬಾಮ್ಮೈದನಿಗೆ ಸೇರಿತ್ತು. ಇನ್ನೊಂದು ಆರೋಪಿಗೆ ಸೇರಿತ್ತು . ಆರೋಪಿಗೆ ಬಾಮ್ಮೈದನಿಗೆ ಸೇರಿದ ಕಾರು ಫಿಸ್ಟಾ ಫೋರ್ಡ್ ಆಗಿತ್ತು .

ಆರೋಪಿಗೆ ಸೇರಿದ ಕಾರು ಟಾಟಾ ಎಸ್ಟೇಟ್ ಆಗಿತ್ತು . ಆ ಕಾರುಗಳ ಸಂಖ್ಯೆ ನೆನಪಿಲ್ಲ. ಆ ಮನೆಯ ಆವರಣದಲೆಲ್ಲಾ ಪರಿಶೀಲಿಸಿದೆವು . ಅದಕ್ಕೆ ಸುತ್ತಲೂ ಆವರಣ ಗೋಡೆ ಇತ್ತು . ಅಲ್ಲಿ ಹೂವಿನ ಕುಂಡಗಳು ಇದ್ದವು . ಮನೆಗೆ ವಿದ್ಯುತ್ ಮೀಟರ್ ಇತ್ತು . ನಂತರ ಮನೆಯಲ್ಲಿರುವ ವಸ್ತುಗಳ ಶೋಧನೆ ಮಾಡುವುದಾಗಿ ಆರೋಪಿಯ ಮನೆಯಲ್ಲಿದ್ದವರಿಗೆ ಆರಕ್ಷಕ ನಿರೀಕ್ಷಕರು ತಿಳಿಸಿದರು . ಮೊದಲು ಮನೆಯ ಪೋರ್ಟಿಕೋ ಪ್ರವೇಶಿಸಿದೆವು . ಅಲ್ಲಿ ಮೂರು ಪ್ಲಾಸ್ಟಿಕ್ ಚೆರ್ ಇದ್ದವು . ಒಂದು ಪ್ಲಾಸ್ಟಿಕ್ ನೆಲ ಹಾಸು ಇತ್ತು . ಅಲ್ಲಿ ಗ್ರಾನೈಟ್ ಟೈಲ್ಸ್ ಫ್ಲೋರ್ ಇತ್ತು . ಅಲ್ಲಿದ್ದ ವಸ್ತುಗಳನ್ನು ಪಟ್ಟಿ ಮಾಡಿಕೊಂಡರು . ಅಲ್ಲಿಂದ ನಾವು ಮನೆಯ ಒಳಭಾಗಕ್ಕೆ ಹೋದೆವು . ಅಲ್ಲಿ ಸಿಟ್ ಔಟ್ ಇತ್ತು . ಅಲ್ಲಿ ಗ್ರಾನೈಟ್ ನೆಲ ಇತ್ತು . ಅಲ್ಲಿ ಚಪ್ಪಲಿ ಸ್ಟ್ಯಾಂಡ್ , ಚಪ್ಪಲಿಗಳು ಶ್ಯೂಗಳು , ಅಕ್ವೇರಿಯಂ , ಚೆರುಗಳು , ಸೋಫಾ ಸೆಟ್ , ಟಿಫಾಯಿ , ಆರಾಮ ಕುರ್ಚಿ , ಸ್ಟಡಿ ಟೇಬಲ್ , ಹೂವಿನ ಕುಂಡ , ಮತ್ತೊಂದು ಟಿಪಾಯಿ , ಹೂವಿನ ಕುಂಡ , ಟಿವಿ ಶೋಕೇಸ್ , ಅದರಲ್ಲಿ ವಿವಿಧ ಗೊಂಬೆಗಳು , ಪುಸ್ತಕಗಳು, ಸ್ಯಾಮಸಂಗ್ ಕಲರ್ ಟಿವಿ , ಡೆಲ್ ಕಂಪನಿಯ ಲ್ಯಾಪಟಾಪ್, ಬಿಎಸ್ ಎನ್ ಎನ್ ಸ್ಥಿರ ದೂರವಾಣಿ , ಬಜಾಜ ಮಿಡಿಯಾ ವಾಲ್ ಮೌಂಟಿನ್ ಫ್ಯಾನ್ , ಗೋಡೆಗೆ ತೂಗಿ ಹಾಕಿದ್ದ ಶೋ ಲೈಟ್ , ಗ್ಲಾಸ್ ಅಳವಡಿಸಿದ್ದ ರೋಜ ವುಡ್ ಟಿಪಾಯಿ, ದೇವರ ಪೋಟೋ , ಒಂದು ಮೂಲೆಯ ಟಿಪಾಯಿ ಅದರ ಮೇಲೆ ಮರದ ಆನೆ, ರಿಲಯನ್ಸ್ ದೊಡ್ಡ ಟಿವಿ , ಟಿವಿ ಶೋ ಕೇಸ್ ನಲ್ಲಿರುವ ಪುಸ್ತಕಗಳು ಮತ್ತು ನ್ಯೂಸ್ ಪೇಪರ್ , ನಾಲ್ಕು ದೊಡ್ಡ ಆರು ಚಿಕ್ಕ ಆಲ್ ಬಂ ಗಳು ಮತ್ತು ಕಿಟಕಿಗಳಿಗೆ ಸ್ಕ್ರೀನ್ ಗಳು ಇದ್ದವು .

2. ನಂತರ ಸಿಟ್ ಔಟ್ ನ ದಕ್ಷಿಣಕ್ಕೆ ಡೈನಿಂಗ್ ಹಾಲ್ ಇತ್ತು . ಅಲ್ಲಿ ಕೆಳಕಂಡ ವಸ್ತುಗಳು ಕಂಡು ಬಂದವು .

| |
|---|
| ರೋಸ್ ವುಡ್ ನ ಗ್ಲಾಸ್ ಅಳವಡಿಸಿರುವ ಡೈನಿಂಗ್ ಟೇಬಲ್ ಮತ್ತು 5 ಚೇರುಗಳು |
| ಡೈನಿಂಗ್ ಚೇರ್ ಗೆ ಅಳವಡಿಸಿರುವ ಕುಷನ್ |
| ಒಂದು ಪೋಲಾರ್ ಸೀಲಿಂಗ್ ಫ್ಯಾನ್ |
| 3 ಸಾದಾ ಬಲ್ಬ್ ಗಳು |
| ಒಂದು ಟಿವಿ ಶೋಕೇಸ್ ಪ್ಲೈವುಡ್ ಶೀಟಿನಿಂದ ಮಾಡಿದ್ದು 6 * 6 ಅಡಿ ಅಳತೆ |
| ಶೋಕೇಸ್ ನಲ್ಲಿ ಪಿಂಗಾಣಿ , ಗಾಜಿನ ಸಾಮಗ್ರಿಗಳು ಮತ್ತು ಶೋ ಫ್ಲವರ್ ಗಳು |

| |
|---|
| 6 ಮರದ ಹಾಗೂ ಮೆಟಲ್ ದೇವರ ವಿಗ್ರಹಗಳು ಶೋಕೇಸ್ ಮೇಲೆ |
| ಶೋಕೇಸ್ ಡ್ರಾಯರ್ ನಲ್ಲಿ ಟೀಚರ್ಸ್ ಸ್ಕಾಚ್ 750 ಎಂ ಎಲ್ ವಿಸ್ಕಿ, ಬ್ಯಾಕ್ ಡಾಗ್ ವಿಸ್ಕಿ ಬಾಟಲ್ |
| ಚ್ಯಾಂಟಿಲಿ 750 ಎಂ ಎಲ್ ನ 2 ವೈನ್ ಬಾಟಲ್ , ಫಾಸ್ಟರಸ್ ಬಿಯರ್ |
| ಸಿಗ್ನೇಚರ್ ವಿಸ್ಕಿ 2 ಬಾಟಲು |
| ಒಂದು ವಾಶ್ ಬೇಸಿನ್ ವಿತ್ ಮಿರರ್ |
| ಒಂದು ಸಮಯ್ ಕಂಪನಿಯ ಗೋಡೆ ಗಡಿಯಾರ |

3. ನಂತರ ನಾವು ಅಲ್ಲಿಂದ ಮಾಸ್ಟರ್ ಬೇಡ್ ರೂಂ ಗೆ ಹೋದೆವು . ಅಲ್ಲಿ ಗ್ರಾನೈಟ್ ನೆಲ ಇತ್ತು . ಅಲ್ಲಿ ಈ ಕೆಳಕಂಡ ವಸ್ತುಗಳು ಇದ್ದವು .

| |
|---|
| ಒಂದು ಪ್ಲೈವುಡ್ ಸನ್ ಮೈಕ್ ನ ಡಬ್ಬಲ್ ಕಾಟ್ |
| ಬಟ್ಟೆ ಹಾಕುವ ಒಂದು ರೋಸ್ ವುಡ್ ಸ್ಟ್ಯಾಂಡ್ |
| ಒಂದು ಫಿಲಿಪ್ಸ್ ಐರನ್ ಬಾಕ್ಸ್ |
| ವಾರ್ಡ್ ರೋಬ್ ಮೇಲೆ ಶೋ ಬೊಂಬೆಗಳು |
| ಗೋಡೆಗೆ ಅಳವಡಿಸಿರುವ ವಾರ್ಡ್‌ರೋಬ್ |
| ದೇವರ ಮರದ ವಿಗ್ರಹಗಳು |
| ಒಂದು ಪೋಲಾರ್ ಸೀಲಿಂಗ್ ಫ್ಯಾನ್ , ಸಿಎಫ್ ಎಲ್ ಬಲ್ಬ್, ಟ್ಯೂಬ್ ಲೈಟ್ |

4. ಅದೇ ಮಾಸ್ಟರ್ ಬೆಡ್ ರೂಂನಲ್ಲಿ ವಾರ್ಡ್ ರೋಬ್ ನಲ್ಲಿ ಈ ಕೆಳಕಂಡ ವಸ್ತುಗಳು ಕಂಡು ಬಂದವು .

| |
|---|
| ಚಿನ್ನ ಮತ್ತು ಕರಿಮಣಿ ಸೇರಿದ ಮಾಂಗಲ್ಯ ಸರ |
| ಚಿನ್ನ ಮತ್ತು ಕರಿಮಣಿ ಸೇರಿದ ಮಾಂಗಲ್ಯ ಸರ |
| ಚಿನ್ನ ಮತ್ತು ಕರಿಮಣಿ ಸೇರಿದ ಮಾಂಗಲ್ಯ ಸರ |
| ಚಿನ್ನ ಮತ್ತು ಹವಳ ಕರಿಮಣಿ ಸೇರಿದ ಮಾಂಗಲ್ಯ ಸರ |
| ಒಂದು ಕರಿಮಣಿ ಚಿನ್ನದ ಬಳೆ |
| ದಾರದಲ್ಲಿ ಪೋಣಿಸಿರುವ ಚಿನ್ನ ಮತ್ತು ಮುತ್ತಿನ ಸರ |
| ಒಂದು ಚಿನ್ನದ ಬ್ರಾಸ್ ಲೇಟ್ |
| ಒಂದು ಸ್ಟೋನ್ ಚಿನ್ನದ ಚೈನು |

| |
|---|
| ಒಂದು ಮುತ್ತು ಅಳವಡಿಸಿರುವ ಚಿನ್ನದ ಸರ |
| ಎರಡು ಜೊತೆ ಮುತ್ತಿನ ಚಿನ್ನದ ಓಲೆ |
| ಎರಡು ಜೊತೆ ಕಪ್ಪು ಹರಳಿನ ಚಿನ್ನದ ಓಲೆ |
| ಒಂದು ಜೊತೆ ಕೆಂಪು ಬಿಳಿ ಹರಳಿನ ಚಿನ್ನದ ಓಲೆ |
| ಎರಡು ಜೊತೆ ಹರಳಿನ ಓಲೆ ಮತ್ತು ಒಂದು ಪೆಂಡೆಂಟ್ |
| 3 ಜೊತೆ ಚಿನ್ನದ ಕಿವಿಯ ರಿಂಗ್ ಗಳು |
| 2 ಚಿನ್ನದ ಪೆಂಡೆಂಟ್ ಗಳು |
| ಒಂದು ಜೊತೆ ಮುತ್ತಿನ ಕಿವಿಯ ಓಲೆ ಮತ್ತು ಪೆಂಡೆಂಟ್ |
| ಒಂದು ಜೊತೆ ಹರಳಿನ ಹ್ಯಾಂಗಿಂಗ್ಸ್ |
| ಒಂದು ಚಿನ್ನದ ನವಿಲ್ ಸೆಟ್ ನ ನೆಕ್ಲೇಸ್ ಮತ್ತು ಒಂದು ಜೊತೆ ಕಿವಿಯ ಓಲೆ |

5. ನಂತರ ಆರೋಪಿ ಹೆಂಡತಿ ಮೈಮೇಲೆ ಇದ್ದ ಒಡವೆಗಳನ್ನು ಪರಿಶೀಲಿಸಿದೆವು. ಅವು ಈ ಕೆಳಕಂಡಂತೆ ಇದ್ದವು .

| |
|---|
| 4 ಚಿನ್ನದ ಬಳೆಗಳು |
| 2 ಚಿನ್ನದ ಉಂಗುರಗಳು ಹವಳ ಸೇರಿ |
| ಚಿನ್ನದ ಕರಿಮಣಿ ಸರ |

6. ವಾರ್ಡ್ ರೋಬ್ ನಲ್ಲಿ ಕೆಳಕಂಡ ಬೆಳ್ಳಿ ವಸ್ತುಗಳು ಸಿಕ್ಕಿದವು .

| |
|---|
| ಒಂದು ಬೆಳ್ಳಿಯ ಕಪ್ |
| ಕೊಡುಗೆಯಾಗಿ ಬಂದಿರುವ ಬೆಳ್ಳಿಯ ಪದಾರ್ಥಗಳು |
| ಒಂದು ಜೊತೆ ಬೆಳ್ಳಿಯ ಕಾಲು ಚೈನು |

7. ಅದೇ ವಾರ್ಡ್ ರೋಬ್ ನಲ್ಲಿ ನಗದು ಹಣ ರೂ. 18,500/- ಇತ್ತು . ಬಂಗಾರ ಮತ್ತು ಬೆಳ್ಳಿ ವಸ್ತುಗಳ ತೂಕ ಮತ್ತು ಮೌಲ್ಯಮಾಪನ ಮಾಡಲು ತನಿಖಾಧಿಕಾರಿಯವರು ಅಕ್ಕಸಾಲಿಗರಾದ ಪ್ರಕಾಶ ಗಣಪಯ್ಯ ಕುಡಾಲಕರ ಎನ್ನುವವರನ್ನು ಅಂಕೋಲಾದಿಂದ ಕರೆಯಿಸಿದ್ದರು . ಅವರು ಅಲ್ಲಿ ಸಿಕ್ಕ ಎಲ್ಲಾ ಚಿನ್ನ ಮತ್ತು ಬೆಳ್ಳಿ ವಸ್ತುಗಳನ್ನು ತೂಕ ಮಾಡಿ ಮೌಲ್ಯವನ್ನು ಹೇಳಿದರು . ಅದನ್ನು ತನಿಖಾಧಿಕಾರಿ ಪಟ್ಟಿ ಮಾಡಿಕೊಂಡರು .

8. ವಾರ್ಡ್ ರೋಬ್ ನಲ್ಲಿ ಈ ಕೆಳಕಂಡ ದಾಖಲಾತಿಗಳು ಸಿಕ್ಕಿದವು .

| |
|---|
| ಶಾಂತಿಕಾ ಸೌಹಾರ್ದ ಸಹಕಾರಿ ನಿಯಮಿತ ಸರ್ಟಿಫಿಕೇಟ್<br>ಕಲಾ ಹಿತ್ತಲಮಕ್ಕಿರವರ ಹೆಸರಿನಲ್ಲಿದೆ |
| ಎನ್ ಎಸ್ ಸಿ 40 ಡಿಡಿ 421074<br>ನರೇಂದ್ರ ಹಿತ್ತಲಮಕ್ಕಿರವರ ಹೆಸರಿನಲ್ಲಿದೆ |
| ಎನ್ ಎಸ್ ಸಿ 54 ಇಇ 494533<br>ನರೇಂದ್ರ ಹಿತ್ತಲಮಕ್ಕಿರವರ ಹೆಸರಿನಲ್ಲಿದೆ |
| ಎನ್ ಎಸ್ ಸಿ 54 ಇಇ 559904<br>ಕಲಾ ನರೇಂದ್ರ ಹಿತ್ತಲಮಕ್ಕಿರವರ ಹೆಸರಿನಲ್ಲಿದೆ |
| ಎನ್ ಎಸ್ ಸಿ 54 ಇಇ 559905<br>ಕಲಾ ನರೇಂದ್ರ ಹಿತ್ತಲಮಕ್ಕಿರವರ ಹೆಸರಿನಲ್ಲಿದೆ |
| ಎನ್ ಎಸ್ ಸಿ 54 ಇಇ 559906<br>ಕಲಾ ನರೇಂದ್ರ ಹಿತ್ತಲಮಕ್ಕಿರವರ ಹೆಸರಿನಲ್ಲಿದೆ |
| ಎನ್ ಎಸ್ ಸಿ 54 ಇಇ 559907<br>ಕಲಾ ನರೇಂದ್ರ ಹಿತ್ತಲಮಕ್ಕಿರವರ ಹೆಸರಿನಲ್ಲಿದೆ |
| ಎನ್ ಎಸ್ ಸಿ 54 ಇಇ 559908<br>ಕಲಾ ನರೇಂದ್ರ ಹಿತ್ತಲಮಕ್ಕಿರವರ ಹೆಸರಿನಲ್ಲಿದೆ |
| ಎನ್ ಎಸ್ ಸಿ 79 ಇಇ 026814<br>ವೇದಾಂತ ಎನ್. ಹಿತ್ತಲಮಕ್ಕಿರವರ ಹೆಸರಿನಲ್ಲಿದೆ |
| ಎನ್ ಎಸ್ ಸಿ 81 ಇಇ 496190<br>ವಿನಂತಿ ಎನ್. ಹಿತ್ತಲಮಕ್ಕಿರವರ ಹೆಸರಿನಲ್ಲಿದೆ |
| ಕೆ ವಿ ಪಿ ನಂ. 05 ಜಿಜಿ 280115<br>ವಿನಂತಿ ಎನ್. ಹಿತ್ತಲಮಕ್ಕಿರವರ ಹೆಸರಿನಲ್ಲಿದೆ |
| ದ್ವಾರ್ಕ ಸೌಹಾರ್ದ ಕ್ರೆಡಿಟ್ ಸಹಕಾರಿ ಲಿ. ಅಂಕೋಲಾದ ಕ್ಯಾಶ್ ಸರ್ಟಿಫೀಕೆಟ್ ಅಕೌಂಟ್ ನಂ. 12343 ರಿಂದ 12352 |
| ವಿಜಯಾ ಬ್ಯಾಂಕ್ ಟರ್ಮ್ ಡಿಪಾಸಿಟ್ ರಸೀದಿ ನಂ. 219006 ಅಕೌಂಟ್ ನಂ. 270484 ವಿನಂತಿ ನರೇಂದ್ರ ಹಿತ್ತಲಮಕ್ಕಿರವರ ಹೆಸರಿನಲ್ಲಿದೆ. |
| ಸಿಂಡಿಕೇಟ್ ಬ್ಯಾಂಕ್ ನ ವಿಕಾಸ್ ಕ್ಯಾಶ್ ಸರ್ಟಿಫೀಕೇಟ್ ಅಂಕೋಲಾ ಬ್ರಾಂಚ್ ಎಸ್ ಬಿ ಎಫ್ ನಂ. 354640 ಅಕೌಂಟ್ ನಂ. 03044050064835/1 ಕಲಾ ಎನ್. ಹಿತ್ತಲಮಕ್ಕಿರವರ ಹೆಸರಿನಲ್ಲಿದೆ. |

| |
|---|
| ಗೋಕರ್ಣ ಸೀ view ಬೀಚ್ ರೆಸಾರ್ಟ್ ಪ್ರೈ.ಲಿ. ನ ಶೇರ್ ಸರ್ಟಿಫೀಕೇಟ್ ನಂ. 1 ರಿಂದ 10 ಶ್ರೀ ನಾಗರಾಜು ಗೋವಿಂದರಾಯ್ ಹಿತ್ತಲಮಕ್ಕಿರವರ ಹೆಸರಿನಲ್ಲಿದೆ |
| ಗೋಕರ್ಣ ಸೀ view ಬೀಚ್ ರೆಸಾರ್ಟ್ ಪ್ರೈ.ಲಿ. ನ ಶೇರ್ ಸರ್ಟಿಫೀಕೇಟ್ ನಂ. 11 ರಿಂದ 20 ಶ್ರೀ ವೇದಾಂತ ನರೇಂದ್ರ ಹಿತ್ತಲಮಕ್ಕಿರವರ ಹೆಸರಿನಲ್ಲಿದೆ |
| ಗೋಕರ್ಣ ಸೀ view ಬೀಚ್ ರೆಸಾರ್ಟ್ ಪ್ರೈ.ಲಿ. ನ ಶೇರ್ ಸರ್ಟಿಫೀಕೇಟ್ ನಂ. 21 ರಿಂದ 30 ಶ್ರೀಮತಿ ಜಯಾ ದೇವರಾಯ ನಾಯಕರವರ ಹೆಸರಿನಲ್ಲಿದೆ |
| ಅಂಕೋಲಾ ಅರ್ಬನ್ ಕೋ. ಆಪ್. ಬ್ಯಾಂಕ್ ಲಿ. ಅಂಕೋಲಾ ಪಾವತಿ ನಂ. 20584 ಸದಸ್ಯತ್ವ ಸಂ. 13901 ಶೇರ್ ಸರ್ಟಿಫೀಕೇಟ್ ಖಾತೆ ಸಂ. 305/34 ನರೇಂದ್ರ ಗೋವಿಂದರಾಯ ಹಿತ್ತಲಮಕ್ಕಿರವರ ಹೆಸರಿನಲ್ಲಿದೆ . |
| ಅಂಕೋಲಾ ಅರ್ಬನ್ ಕೋ. ಆಪ್. ಬ್ಯಾಂಕ್ ಲಿ. ಅಂಕೋಲಾ ಪಾವತಿ ನಂ. 20580 ಸದಸ್ಯತ್ವ ಸಂ. 13897 ಶೇರ್ ಸರ್ಟಿಫೀಕೇಟ್ ಖಾತೆ ಸಂ. 301/34 ಕಲಾ ನರೇಂದ್ರ ಹಿತ್ತಲಮಕ್ಕಿರವರ ಹೆಸರಿನಲ್ಲಿದೆ . |
| ಅಂಕೋಲಾ ಪೋಸ್ಟ್ ಆಪೀಸ್ ನ ಆರ್ ಡಿ ಮೆಚ್ಯೂರಿಟಿ ಚೆಕ್ ಸಂ. ಎಎಫ್ 210570 ಕೋಡ್ ನಂ. 410 ರ ಶ್ರೀಮತಿ ಕೆ.ಎನ್. ಹಿತ್ತಲಮಕ್ಕಿ ರವರ ಹೆಸರಿಗೆ ನೀಡಿರುವ ಚೆಕ್ ನ ನಕಲು |
| ನ್ಯಾಷನಲ್ ಸೆಕ್ಯೂರಿಟಿ ಡೆಪಾಸಿಟರಿ ಲಿ. ಜಿಯೋಜಿತ್ ಫೈನಾಶಿಯಲ್ ಸರ್ವಿಸಸ್ ಲಿ. ಕೊಚ್ಚಿನ್ ಕ್ಲೈಂಟ್ ಐಡಿ ನಂ. 10941676, ನರೇಂದ್ರ ಗೋವಿಂದರಾಯ ಹಿತ್ತಲಮಕ್ಕಿರವರ ಹೆಸರಿನಲ್ಲಿದೆ. |
| ಯು ಟಿ ಐ ಚಿಲ್ಡ್ರನ್ಸ್ ಗಿಫ್ಟ್ ಗ್ರೋತ್ ಫಂಡ್ ಸರ್ಟಿಫೀಕೆಟ್ ನಂ. 339142302413 ರ ಇಂಟಿಮೇಶನ್ ಲೆಟರ್ ವೇದಾಂತ್ ಎನ್ ಹೆಚ್ ರವರ ಹೆಸರಿನಲ್ಲಿದೆ |
| ಯು ಟಿ ಐ ಚಿಲ್ಡ್ರನ್ಸ್ ಗಿಫ್ಟ್ ಗ್ರೋತ್ ಫಂಡ್ ಸರ್ಟಿಫೀಕೆಟ್ ನಂ. 339142302412 ರ ಇಂಟಿಮೇಶನ್ ಲೆಟರ್ ವಿನಂತಿ ಎನ್ ಹೆಚ್ ರವರ ಹೆಸರಿನಲ್ಲಿದೆ |
| ಯು ಟಿ ಐ ಚಿಲ್ಡ್ರನ್ಸ್ ಗಿಫ್ಟ್ ಗ್ರೋತ್ ಫಂಡ್ ಸರ್ಟಿಫೀಕೆಟ್ ನಂ. 303914230241200 ರ ಇಂಟಿಮೇಶನ್ ಲೆಟರ್ ವಿನಂತಿ ಎನ್ ಹೆಚ್ ರವರ ಹೆಸರಿನಲ್ಲಿದೆ |
| ಯು ಟಿ ಐ ಚಿಲ್ಡ್ರನ್ಸ್ ಗಿಫ್ಟ್ ಗ್ರೋತ್ ಫಂಡ್ ಸರ್ಟಿಫೀಕೆಟ್ ನಂ. 303914230241300 ರ ಇಂಟಿಮೇಶನ್ ಲೆಟರ್ ವೇದಾಂತ್ ಎನ್ ಹೆಚ್ ರವರ ಹೆಸರಿನಲ್ಲಿದೆ |
| ಎಲ್ ಐ ಸಿ ಪಾಲಿಸಿ ನಂ. 639559675 ನರೇಂದ್ರ ಗೋವಿಂದರಾಯ ಹಿತ್ತಲಮಕ್ಕಿರವರ ಹೆಸರಿನಲ್ಲಿದೆ. |
| ಎಲ್ ಐ ಸಿ ಪಾಲಿಸಿ ನಂ. 639674082 ನರೇಂದ್ರ ಗೋವಿಂದರಾಯ ಹಿತ್ತಲಮಕ್ಕಿರವರ ಹೆಸರಿನಲ್ಲಿದೆ. |
| ಎಲ್ ಐ ಸಿ ಪಾಲಿಸಿ ನಂ. 637186368 ನರೇಂದ್ರ ಗೋವಿಂದರಾಯ ಹಿತ್ತಲಮಕ್ಕಿರವರ ಹೆಸರಿನಲ್ಲಿದೆ. |
| ಎಲ್ ಐ ಸಿ ಪಾಲಿಸಿ ನಂ. 639676561 ನರೇಂದ್ರ ಗೋವಿಂದರಾಯ ಹಿತ್ತಲಮಕ್ಕಿರವರ ಹೆಸರಿನಲ್ಲಿದೆ. |
| ಎಲ್ ಐ ಸಿ ಪಾಲಿಸಿ ನಂ. 633331802 ಕಲಾ ನರೇಂದ್ರ ಹಿತ್ತಲಮಕ್ಕಿರವರ ಹೆಸರಿನಲ್ಲಿದೆ. |
| ಎಲ್ ಐ ಸಿ ಪಾಲಿಸಿ ನಂ. 638130730 ಕಲಾ ನರೇಂದ್ರ ಹಿತ್ತಲಮಕ್ಕಿರವರ ಹೆಸರಿನಲ್ಲಿದೆ. |
| ಎಲ್ ಐ ಸಿ ಪಾಲಿಸಿ ನಂ. 637628998 ಕಲಾ ನರೇಂದ್ರ ಹಿತ್ತಲಮಕ್ಕಿರವರ ಹೆಸರಿನಲ್ಲಿದೆ. |

| |
|---|
| ಎಲ್ ಐ ಸಿ ಪಾಲಿಸಿ ನಂ. 638125061 ಕಲಾ ನರೇಂದ್ರ ಹಿತ್ತಲಮಕ್ಕಿರವರ ಹೆಸರಿನಲ್ಲಿದೆ. |
| ಎಲ್ ಐ ಸಿ ಪಾಲಿಸಿ ನಂ. 630685130 ಕಲಾ ನರೇಂದ್ರ ಹಿತ್ತಲಮಕ್ಕಿರವರ ಹೆಸರಿನಲ್ಲಿದೆ. |
| ಎಲ್ ಐ ಸಿ ಪಾಲಿಸಿ ನಂ. 637404231 ಕಲಾ ನರೇಂದ್ರ ಹಿತ್ತಲಮಕ್ಕಿರವರ ಹೆಸರಿನಲ್ಲಿದೆ. |
| ಎಲ್ ಐ ಸಿ ಪಾಲಿಸಿ ನಂ. 637953994 ವೇದಾಂತ ನರೇಂದ್ರ ಹಿತ್ತಲಮಕ್ಕಿರವರ ಹೆಸರಿನಲ್ಲಿದೆ. |
| ಎಲ್ ಐ ಸಿ ಪಾಲಿಸಿ ನಂ. 633305873 ವೇದಾಂತ ನರೇಂದ್ರ ಹಿತ್ತಲಮಕ್ಕಿರವರ ಹೆಸರಿನಲ್ಲಿದೆ. |
| ಎಲ್ ಐ ಸಿ ಪಾಲಿಸಿ ನಂ. 637406196 ವಿನಂತಿ ನರೇಂದ್ರ ಹಿತ್ತಲಮಕ್ಕಿರವರ ಹೆಸರಿನಲ್ಲಿದೆ. |
| ಎಲ್ ಐ ಸಿ ಪಾಲಿಸಿ ನಂ. 637646624 ವಿನಂತಿ ನರೇಂದ್ರ ಹಿತ್ತಲಮಕ್ಕಿರವರ ಹೆಸರಿನಲ್ಲಿದೆ. |
| ಎಲ್ ಐ ಸಿ ಪಾಲಿಸಿ ನಂ. 930833341 ವಿನಂತಿ ನರೇಂದ್ರ ಹಿತ್ತಲಮಕ್ಕಿರವರ ಹೆಸರಿನಲ್ಲಿದೆ (ಕ್ರ.ಸಂ. 27 ರಿಂದ 41 ರವರೆಗೆ ಜೆರಾಕ್ಸ್ ಪ್ರತಿಯಲ್ಲಿದೆ) |
| ರಿಲಾಯನ್ಸ್ ಲೈಫ್ ಇನ್ಸೂರೆನ್ಸ್ ಮಾರ್ಕೆಟ್ ರಿಟರ್ನ್ ಪ್ಲಾನ್ ರೆಗ್ಯೂಲರ್ ನ ಕಾಂಟ್ರಾಕ್ಟ್ ನಂ. 10607778 ರ ಪ್ರತಿ ನರೇಂದ್ರ ಹೆಸರಿನಲ್ಲಿದೆ . |
| ರಿಲಾಯನ್ಸ್ ಲೈಫ್ ಇನ್ಸೂರೆನ್ಸ್ ಮಾರ್ಕೆಟ್ ರಿಟರ್ನ್ ಪ್ಲಾನ್2 ರೆಗ್ಯೂಲರ್ ನ ಪಾಲಿಸಿ ನಂ. 10388902 ಕಲಾ ನರೇಂದ್ರ ಹೆಸರಿನಲ್ಲಿದೆ . |
| ಬಜಾಜ್ ಅಲೈಯಾನ್ಸ್ ಲೈಫ್ ಇನ್ಸೂರೆನ್ಸ್ ಕಂಪನಿ ಲಿ. ಪಾಲಿಸಿ ನಂ. 0129834513 ನರೇಂದ್ರ ಗೋವಿಂದರಾಯ ಹಿತ್ತಲಮಕ್ಕಿರವರ ಹೆಸರಿನಲ್ಲಿದೆ. |
| ಐಸಿಐಸಿಐ ಪ್ರುಡೆನ್ ಶಿಯಲ್ ಬಾಂಡ್ ನಂ. 13468450 ನರೇಂದ್ರ ಹೆಸರಿನಲ್ಲಿದೆ . |
| ದ್ವಾರಕಾ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ.ಅಂಕೋಲಾ ಪಾಸ್ ಪುಸ್ತಕ ನಂ. 769 ಕಲಾ ಎನ್ ಹಿತ್ತಲಮಕ್ಕಿರವರ ಹೆಸರಿನಲ್ಲಿದೆ . |
| ವಿಜಯಾ ಬ್ಯಾಂಕ್ ಪುಸ್ತಕ ಅಕೌಂಟ್ ನಂ. 5954 ಕಲಾ ನರೇಂದ್ರರವರ ಹೆಸರಿನಲ್ಲಿದೆ |
| ಕಾರ್ಪೋರೇಶನ್ ಬ್ಯಾಂಕ್ ಖಾತೆ ಪುಸ್ತಕ ಅಕೌಂಟ್ ನಂ. 7704/ವಿ ನರೇಂದ್ರರವರ ಹೆಸರಿನಲ್ಲಿದೆ. |
| ಅಕೋಲಾ ಅರ್ಬನ್ ಕೋ. ಆಪ್. ಬ್ಯಾಂಕ್ ಲಿ. ಅಂಕೋಲಾ ಅಕೌಂಟ್ ನಂ. 20817 ನರೇಂದ್ರರವರ ಹೆಸರಿನಲ್ಲಿದೆ . |
| ವಿಜಯಾ ಬ್ಯಾಂಕ್ ಖಾತೆ ಸಂ. 133601010005954 ರಪಾಸ್ ಪುಸ್ತಕ ಕಲಾ ನರೇಂದ್ರರವರ ಹೆಸರಿನಲ್ಲಿದೆ |
| ವಿಜಯಾ ಬ್ಯಾಂಕ್ ಖಾತೆ ಸಂ. 5391 ರ ಪಾಸ್ ಪುಸ್ತಕ ವೇದಾಂತ ನರೇಂದ್ರರವರ ಹೆಸರಿನಲ್ಲಿದೆ |
| ವಿಜಯಾ ಬ್ಯಾಂಕ್ ಖಾತೆ ಸಂ. 04614 ರ ನರೇಂದ್ರರವರ ಹೆಸರಿನಲ್ಲಿದೆ |
| ಕೃಷಿ ಪಾಸ್ ಪುಸ್ತಕ ಗೋವಿಂದರಾಯ ನಾಯಕರವರ ಹೆಸರಿನಲ್ಲಿದೆ ಪುಸ್ತಕ ಸಂ. 4161 ಖಾತೆ ನಂ. 2 |
| ಮಾನಸಿ ಮನೆಯ ಗೃಹ ಪ್ರವೇಶದ ಆಹ್ವಾನ ಪತ್ರಿಕೆ |
| ಸ್ಟೇಟ್ ಬ್ಯಾಂಕ್ ಇಂಡಿಯಾ ಅಂಕೋಲಾ ಬ್ರಾಂಚ್ ಖಾತೆ ನಂ. 01190019053 ರ ಪಾಸ್ ಪುಸ್ತಕದ ನಕಲು ಪ್ರತಿ ವೇದಾಂತರವರ ಹೆಸರಿನಲ್ಲಿದೆ |

| |
|---|
| ಸ್ಟೇಟ್ ಬ್ಯಾಂಕ್ ಇಂಡಿಯಾ ಬೆಳಗಾಂ ಬ್ರಾಂಚ್ ಖಾತೆ ನಂ. 01190029686 ನರೇಂದ್ರರವರ ಹೆಸರಿನಲ್ಲಿದೆ |
| ಖಾತೆ ಸಂ. 45268 ಕೆನರಾ ಬ್ಯಾಂಕ್ ಖಡೇ ಬಜಾರ್ ಬ್ರ್ಯಾಂಚ್ ಬೆಳಗಾಂ ಜಿಲ್ಲೆ ನರೇಂದ್ರ ರವರ ಹೆಸರಿನಲ್ಲಿದೆ |
| ಅಂಕೋಲಾ ಅರ್ಬನ್ ಕೋ ಆಪ್ ಲಿ . ಉಳಿತಾಯ ಠೇವಣಿ ಖಾತೆ 20819 |
| ಆರ್ ಡಿ ಅಕೌಂಟ್ 572383 ವಿನಂತಿ ನರೇಂದ್ರರವರ ಹೆಸರಿನಲ್ಲಿದೆ |
| ನರೇಂದ್ರ ರವರ ಪಾಸ್ ಪೋರ್ಟ್ ನಕಲು |
| ಕಲಾ ನಾಗೇಂದ್ರ ಹಿತ್ತಲಮಕ್ಕಿರವರ ಪಾಸ್ ಪೋರ್ಟ್ ನಕಲು |
| ವೇದಾಂತ ನರೇಂದ್ರ ಹಿತ್ತಲಮಕ್ಕಿರವರ ಪಾಸ್ ಪೋರ್ಟ್ ನಕಲು |
| ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ನರೇಂದ್ರ ಜಿ. ಹಿತ್ತಲಮಕ್ಕಿರವರ ಎ ಟಿ ಎಂ ಕಾರ್ಡ್ ನ ನಕಲು |
| ಕಲಾ ನರೇಂದ್ರ ರವರ ಪಾನ್ ಕಾರ್ಡ್ ನ ಎಎಪಿಎಚ್ 3358 ಹೆಚ್ ನಕಲು |
| ವೇದಾಂತ ನರೇಂದ್ರ ರವರ ಪಾನ್ ಕಾರ್ಡ್ ನ ಎಸಿವಿಪಿಹಚ್ 2099 ಡಿ ರ ನಕಲು |
| ಡೊಮೆಸ್ಟಿಕ್ ಗ್ಯಾಸ್ ಕಸ್ಟಮರ್ ಕಾರ್ಡ್ ನಂ. 00067480 ರ ಕಸ್ಟಮರ್ ನಂ. 5122 ರ ನಕಲು ರಾಜು ಬಿ ನಾಯಕ ಹೆಸರಿನಲ್ಲಿದೆ |
| ಟಾಟಾ ಎಸ್ಟೇಟ್ ಕಾರ್ ನಂ. ಕೆಎ-03 ಎನ್ 510 ರ ಆರ್ ಸಿ ನಕಲು |
| ಮಾರುತಿ 800 ಕಾರ್ ನಂ. ಕೆಎ-09 ಎಂ 4401 ರ ಆರ್ ಸಿ ನಕಲು |
| ಸಿಂಡಿಕೇಟ್ ಬ್ಯಾಂಕ್ ಅಂಕೋಲಾ ಬ್ರಾಂಚ್ ನ ಡಿ ಡಿ ಚೆಕ್ ನಂ. 793339 ರ ನಕಲು ಪ್ರತಿ |
| ಕಲಾ ನರೇಂದ್ರ ರವರ ಹೆಸರಿನಲ್ಲಿರುವ ಸರ್ವೆ ನಂ. 8 ಅ/ಬ ವಂದಿಗೆ ಗ್ರಾಮದ ಆರ್ ಟಿ ಸಿಯ ನಕಲು |
| ಕಲಾ ನರೇಂದ್ರ ರವರ ಹೆಸರಿನಲ್ಲಿರುವ ವಂದಿಗೆ ಗ್ರಾಮದ ಸರ್ವೆ ನಂ. 8 ಅ ರ ಆರ್ ಟಿ ಸಿಯ ನಕಲು |
| ಹಿತ್ತಲಮಕ್ಕಿ ಗ್ರಾಮದ ಸರ್ವೆ ನಂ. 196/2 ರ ಆರ್ ಟಸಿ ಸಿ ನಕಲು ನರೇಂದ್ರ ರವರ ಹೆಸರಿನಲ್ಲಿದೆ |
| ದಸ್ತಾವೇಜು ಸಂ. 1105/98-99 ರ ಕ್ರಯ ಪತ್ರದ ನಕಲು ಪ್ರತಿ |
| ಖಾತಾ ನಂ. ಶೇಷಗಿರಿ ಹಳ್ಳಿ 109/3 40*61.5 ಅಳತೆ ಉಪ ನೋಂದಣಾಧಿಕಾರಿ , ರಾಮನಗರಂ ರವರು ನೀಡಿರುವ ಹಿಂಬರಹದ ಪ್ರತಿ |
| ಮೆಗಾಸಿಟಿ (ಬೆಂಗಳೂರು) ಡೆವಲಪರ್ಸ್ ಆ್ಯಂಡ್ ಬಿಲ್ಡರ್ಸ್ ರವರು ಸೈಟ್ ರಿಜಿಸ್ಟ್ರೇಷನ್ ಬಗ್ಗೆ ಕಳುಹಿಸಿರುವ ಪತ್ರದ ಪ್ರತಿ ನರೇಂದ್ರ ರವರ ಹೆಸರಿನಲ್ಲಿದೆ |
| ವಿಜಯಾ ಬ್ಯಾಂಕ್ ಅಂಕೋಲಾ ರವರು ನರೇಂದ್ರರವರಿಗೆ ನೀಡಿರುವ ಲೋನ್ ಮಾಹಿತಿ ಪತ್ರ |
| ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರರವರು ನಿವೇಶನ ನೋಂದಣಿ ಬಗ್ಗೆ ಎನ್ ಜಿ ಹಿತ್ತಿಲಮಕ್ಕಿರವರು ಅರ್ಜಿಯೊಂದಿಗೆ ಸಲ್ಲಿಸಿರುವ ನೋಂದಣಿ ಶುಲ್ಕದ ಪ್ರತಿ ರಿಜಿಸ್ಟ್ರೇಶನ್ ಸಂ. 061847 ರೂ. 500/- |
| ಖಾತಾ ನಂ. 8 ಕ್ಕೆ ಸಂಬಂಧಿಸಿದಂತೆ ಕಂದಾಯ ಪಾವತಿ ರಸೀದಿಯ ಪ್ರತಿ |
| ನಾಗೇಶ ಕೆರೆಮನೆರವರ ಮನೆಗೆ ಸಂಬಂಧಿಸಿದ ನಕ್ಷೆ ಪ್ರತಿ |

| |
|---|
| ಗೋಕರ್ಣ ಸೀ view ಬೀಚ್ ರೆಸಾರ್ಟ್ ಪ್ರೈ ಲಿ ಮೆಮೋರ್ಯಾಂಡಮ್ ಪುಸ್ತಕ ಮತುತ ವೇದಾಂತ್ ಎನ್ ಹಿತ್ತಲಮಕ್ಕಿ ಡೈರೆಕ್ಟರ್ ರವರು ಬೋರ್ಡ್ ಮೀಟಿಂಗ್ ಬಗ್ಗೆ ಸಹಿ ಮಾಡಿರುವ ಪ್ರತಿ |

9. ಈಗ ನಾನು ಮೇಲ್ಕಂಡ ದಾಖಲಾತಿಗಳನ್ನು ನ್ಯಾಯಾಲಯದಲ್ಲಿ ನೋಡಿರುತ್ತೇನೆ. ಸದರಿ ದಾಖಲಾತಿಗಳನ್ನು ನಿ.ಪಿ. 4 ರಿಂದ 84 ಎಂದು ಗುರುತಿಸಲಾಯಿತು.

10. ನಂತರ ಅಡಿಗೆ ಮನೆಗೆ ಹೊಂದಿಕೊಂಡಂತೆ ಇದ್ದ ಸ್ಟೋರ್ ರೂಂ ಅನ್ನು ಪರಿಶೀಲಿಸಿದೆವು. ಅದಕ್ಕೆ ಗ್ರಾನೈಟ್ ಸ್ಲಾಬ್ ನೆಲ ಇತ್ತು . ಅಲ್ಲಿ ಸ್ಟೀಲ್ ಪಾತ್ರೆಗಳು ಡಬ್ಬಗಳು ಮತ್ತು ದಿನಸಿ ಪದಾರ್ಥಗಳು ಇದ್ದವು. ನಂತರ ಅದರ ಪಕ್ಕದಲ್ಲಿ ಇದ್ದ ಯುಟಿಲಿಟಿ ರೂಂ ನಲ್ಲಿ ಪರಿಶೀಲಿಸಿದಾಗ ಅಲ್ಲಿ ನೆಲ ಗ್ರಾನೈಟ್ ಸ್ಲಾಬ್ ನದ್ದಾಗಿತ್ತು . ಅಲ್ಲಿ ಒಂದು ಎಲ್ ಜಿ ಕಂಪನಿಯ ವಾಶಿಂಗ್ ಮಷಿನ್ , ದಿನನಿತ್ಯ ಧರಿಸುವ ಬಟ್ಟೆಗಳು, ವಾಶಿಂಗ್ ಪೌಡರ್–ಲಿಕ್ವಿಡ್ , ಹಳೆ ತಾಮ್ರದ ಪಾತ್ರೆ , ಒಂದು ಸಿ ಎಫ್ ಎಲ್ ಬಲ್ಬ್ ಇದ್ದವು . ಯುಟಿಲಿಟಿ ರೂಂ ಪಕ್ಕದಲ್ಲಿ ಶೌಚಾಲಯ ಮತ್ತು ಸ್ನಾನದ ಕೋಣೆ ಇದ್ದವು . ಅಲ್ಲಿ ನೆಲಕ್ಕೆ ಟೈಲ್ಸ್ ಹಾಕಿದ್ದರು . ಅಲ್ಲಿ ಒಂದು ಪ್ಲಾಸ್ಟಿಕ್ ಬಕೇಟ್, ಎರಡು ಸೋಪು, 3 ಶ್ಯಾಂಪು ಬಾಟಲ್ , ಒಂದು ಸಿ ಎಫ್ ಎಲ್ ಬಲ್ಬ್ ಇದ್ದವು. ಅಲ್ಲಿಂದ ನಾವು ಮೆಟ್ಟಲಿನ ಮೂಲಕ ಮೇಲಿನ ಅಂತಸ್ತಿನ ಮನೆಗೆ ಹೋದೆವು . ಅಲ್ಲಿ ಒಂದು ಮಲಗುವ ಕೋಣೆ ಇತ್ತು . ಅದಕ್ಕೆ ಬಿಳಿ ಮಾರ್ಬಲ್ ನೆಲ ಇತ್ತು . ಅಲ್ಲಿ ಕೆಳಕಂಡ ವಸ್ತುಗಳು ಇದ್ದವು .

| |
|---|
| ಒಂದು ವಾರ್ಡ್ ರೋಬ್ ಗೋಡೆಗೆ ಹೊಂದಿಕೊಂಡಿದೆ |
| ವಾರ್ಡ್ ರೋಬಿನ ಒಂದು ಕಪಾಟಿನಲ್ಲಿ 4 ಜಮಖಾನ , 3 ಹತ್ತಿ ಹಾಸಿಗೆ ಮತ್ತು 3 ತಲೆ ದಿಂಬುಗಳು , 1 ಕಂಬಳಿ |
| ಮತ್ತೊಂದು ಕಪಾಟಿನಲ್ಲಿ ಡ್ರೆಸ್ಸಿಂಗ್ ಮಿರರ್ ಅಳವಡಿಸಿದ್ದು , ಡ್ರಾಯರ್ ನಲ್ಲಿ ಫಾಸ್ಟ್ ಯಾರ್ಕ್ ಎಂಬ ರಿಸ್ಟ್ ವಾಚ್ |
| ಮತ್ತೊಂದು ಕಪಾಟಿನಲ್ಲಿ 6 ರೇಷ್ಮೆ ಸೀರೆಗಳು |
| ಇತರೆ ಕಾಟನ್ ಮತ್ತು ನೈಲಾನ್ ಸೀರೆಗಳು |
| 4 ಶಾಲುಗಳು |
| ಮೇಲಿನ ಕಪಾಟಿನಲ್ಲಿ 5 ವಿಐಪಿ ಹಳೆಯ ಸೂಟ್ ಕೇಸ್ ಗಳು ಇದ್ದು ಅದರಲ್ಲಿ ಒಂದರಲ್ಲಿ ಹಳೆ ಬಟ್ಟೆಗಳು |

| |
|---|
| ಇದ್ದು ಉಳಿದ 4 ಖಾಲಿ ಇತ್ತು |
| ಒಂದು ಎ ಸಿ ಎಲ್ ಜಿ ಕಂಪನಿಯದ್ದು |
| ಬೀಟೆ ಮರದ ಡಬ್ಬಲ್ ಕಾಟ್ ಗೋಡೆಗೆ ಹೊಂದಿಕೊಂಡಿದೆ |
| ಕರ್ಲಾನ್ ಡಬ್ಬಲ್ ಬೆಡ್ ಮತ್ತು ಪಿಲ್ಲೋ , ಬೆಡ್ ಸ್ಪ್ರೇಡ್ |
| ಒಂದು ಪೋಲಾರ್ ಫ್ಯಾನ್ |
| ಒಂದು ರೋಸ್ ವುಡ್ ಈಸಿಚೇರ್ |

11. ಅಲ್ಲಿಂದ ಡ್ರೆಸಿಂಗ್ ರೂಂ ಗೆ ಹೋದೆವು . ಅಲ್ಲಿ ನೆಲಕ್ಕೆ ವೈಟ್ ಮಾರ್ಬಲ್ ಅಳವಡಿಸಿದ್ದರು . ಅಲ್ಲಿ ಈ ಕೆಳಕಂಡ ವಸ್ತುಗಳು ದೊರೆತವು .

| |
|---|
| ಒಂದು ಚಿಕ್ಕ ಮರದ ವಾರ್ಡ್ ರೋಬ್ |
| ವಾರ್ಡ್ ರೋಬ್ ನ ಒಳಗೆ 2 ಕಪಾಟುಗಳು ಇದು ಮೊದಲನೆಯದರಲ್ಲಿ 20 ಹೊಸ ಮತ್ತು ಹಳೆಯ ಬೆಡ್ ಶೀಟ್ ಗಳು |
| ಸದರಿ ಡ್ರೆಸ್ಸಿಂಗ್ ರೂಂ ಗೆ ಹೊಂದಿಕೊಂಡಂತೆ ಸ್ನಾನದ ಮತ್ತು ಶೌಚಾಲಯದ ಕೋಣೆಯಿದ್ದು ಅದರಲ್ಲಿ ಒಂದು ವಾಷ್ ಬೇಸಿನ್ , ಕನ್ನಡಿ ಮತುತ ಟ್ಯಾಪ್ , ಬಾತ್ ಟಬ್ ಇದ್ದು ಕೋಣೆಗೆ ಹೊಂದಿಕೊಂಡಿರುತ್ತದೆ |
| ಒಂದು ಪ್ಲಾಸ್ಟಿಕ್ ಬಕೇಟ್ , ಪ್ಲಾಸ್ಟಿಕ್ ಮಗ್ , ಸೋಪು , ಶೇವಿಂಗ್ ಬ್ರಷ್ , ಶೇವಿಂಗ್ ಕ್ರೀಂ , ಟೂತ್ ಪೇಸ್ಟ್ ಇರುತ್ತದೆ . |

12. ನಂತರ ಅದರ ಪಕ್ಕದಲ್ಲಿ ಇದ್ದ ಸಣ್ಣ ಮಲಗುವ ಕೋಣೆಗೆ ಹೋಗಿ ಪರಿಶೀಲಿಸಿದೆವು . ಅಲ್ಲಿ ನೆಲಕ್ಕೆ ವೈಟ್ ಮಾರ್ಬಲ್ ಅಳವಡಿಸಲಾಗಿತ್ತು . ಆ ಮಲಗುವ ಕೋಣೆಯಲ್ಲಿ ಈ ಕೆಳಕಂಡ ವಸ್ತುಗಳು ಕಂಡು ಬಂದವು .

| |
|---|
| ಸದರಿ ಕೋಣೆಯ ಉತ್ತರ ದಿಕ್ಕಿಗೆ ಒಂದು ವಾರ್ಡ್ ರೋಬ್ ಇದ್ದು ಅದರಲ್ಲಿ ಎರಡು ಕಪಾಟುಗಳು ಇದ್ದು ಮಧ್ಯದಲ್ಲಿ ಕನ್ನಡಿ ಅಳವಡಿಸಿರುತ್ತದೆ |
| ಮೊದಲನೆಯ ಕಪಾಟಿನಲ್ಲಿ 27 ವಿಡಿಯೋ ಕ್ಯಾಸೆಟ್ , 50 ಆಡಿಯೋ ಕ್ಯಾಸೆಟ್ ಇತ್ತು |
| ಎರಡನೆಯ ಕಪಾಟಿನಲ್ಲಿ ಹಳೆಯ ಹಾಗೂ ಹೊಸ ಡ್ರೆಸ್ ಗಳು ಇರುತ್ತವೆ |
| ಮೂರನೇ ಕಪಾಟಿನಲ್ಲಿ ಹಳೆಯ ವಿದ್ಯಾಭ್ಯಾಸದ ಪುಸ್ತಕಗಳು 5 ಪುಸ್ತಕಗಳು ಇರುತ್ತವೆ |
| ರೂಂ ನಲ್ಲಿ ಒಂದು ಸೀಲಿಂಗ್ ಫ್ಯಾನ್ ಇರುತ್ತದೆ |
| ಬೀಟೆ ಮರದಿಂದ ಮಾಡಿರುವ 2 ಒಂಟಿ ಮಂಚಗಳು ಮತ್ತು ಅದಕ್ಕೆ ಸಾಮಾನ್ಯ ಹಾಸಿಗೆಗಳು , ಎರಡು ತಲೆ ದಿಂಬುಗಳು ಮತ್ತು ಅದಕ್ಕೆ ಸೇರಿದ ಒಂದು ಬೆಡ್ ಶೀಟ್ ಇರುತ್ತದೆ . |

| |
|---|
| 6*5 ಅಳತೆಯ ಕೋಣೆಗೆ ಹೊಂದಿಕೊಂಡಂತೆ ಅಟ್ಯಾಚ್ಡ್ ಬಾತ್ ರೂಂ ಮತ್ತು ಶೌಚಾಲಯದ ಟವ್ ಇರುತ್ತದೆ . ಅದರಲ್ಲಿ ವಾಶ್ ಬೇಸಿನ್ , ಒಂದು ಕನ್ನಡಿ ಹಾಗೂ ಕಮೋಡ್ ಇರುತ್ತದೆ . |
| ಒಂದು ಪ್ಲಾಸ್ಟಿಕ್ ಬಕೇಟ್ ಮತ್ತು ಮಗ್ , ಟೂತ್ ಪೇಸ್ಟ್, ಶ್ಯಾಂಪೂ , ಸೋಪು ಇರುತ್ತದೆ . |

13. ನಂತರ ಅದರ ಪಶ್ಚಿಮಕ್ಕೆ ಇದ್ದ ಪ್ಯಾಸೇಜ್ ಗೆ ಹೋಗಿ ಪರಿಶೀಲಿಸಿದೆವು . ಅಲ್ಲಿ ಒಂದು ವೋಲ್ಟಾಸ್ ಕಂಪನಿಯ ಏರ ಕಂಡಿಶನರ್ ಸೆಟ್ ಮತ್ತು ಎರಡು ಸೋಲಾರ್ ಬ್ಲಾಕ್ ಕಂಪನಿಯ ಬ್ಯಾಟರಿ, ಒಂದು ಬೆತ್ತದ ಕುರ್ಚಿ ಇದ್ದವು . ಅದಲ್ಲದೇ ಆರೋಪಿಯ ಹೆಂಡತಿ ಮತ್ತು ಮಗಳ ಬಳಿ ಮೊಬೈಲ್ ಫೋನುಗಳು ಇದ್ದವು . ಮೇಲ್ಕಂಡ ಎಲ್ಲಾ ಸಂಗತಿಗಳನ್ನು ಆಗ ಪಂಚನಾಮೆ ಬರೆದು ಅದರಲ್ಲಿ ನಮೂದಿಸಲಾಗಿರುತ್ತದೆ . ಎಲ್ಲಿ ಎಲ್ಲಿ ಸಾಧ್ಯತೆ ಇದೆ ಅಲ್ಲಿ ಖರೀದಿ ಮಾಡಿದ ವರ್ಷ ಮತ್ತು ಅದು ಮಾಲೀಕರದ್ದು ಎಂದು ನಮೂದು ಮಾಡಿದ್ದಾರೆ . ಎಲ್ಲಾ ವಸ್ತುಗಳ ಅಂದಾಜು ಬೆಲೆಯನ್ನು ಸಹ ನಮೂದು ಮಾಡಿರುತ್ತಾರೆ . ಆರೋಪಿಯ ಹೆಂಡತಿ ಮತ್ತು ಅವರ ಮನೆಯಲ್ಲಿ ಇದ್ದವರನ್ನು ಯಾವಾಗ ಆ ವಸ್ತುಗಳನ್ನು ಖರೀದಿ ಮಾಡಿದರು ಮತ್ತು ಎಷ್ಟು ಬೆಲೆಗೆ ಖರೀದಿ ಮಾಡಿದರು ಎಂದು ಕೇಳಿ ಆ ಬೆಲೆಯನ್ನು ನಮೂದಿಸಿರುತ್ತಾರೆ . ಬಂಗಾರದ ಮತ್ತು ಬೆಳ್ಳಿ ಬಗ್ಗೆ ಅಕ್ಕಸಾಲಿಗರು ತೂಕ ಮಾಡಿ ಹೇಳಿದ ಮೌಲ್ಯವನ್ನು ನಮೂದಿಸಿರುತ್ತಾರೆ . ದಾಖಲಾತಿಗಳನ್ನು ಬಿಟ್ಟು ಬಾಕಿ ಎಲ್ಲಾ ವಸ್ತುಗಳನ್ನು ಪಂಚನಾಮೆಯಲ್ಲಿ ನಮೂದಿಸಿಕೊಂಡು ವಾಪಸ್ಸು ಮನೆಯಲ್ಲಿ ಹಾಜರಿದ್ದ ಆರೋಪಿಯ ಹೆಂಡತಿ ಮತ್ತು ಮಕ್ಕಳ ವಶಕ್ಕೆ ಬಿಟ್ಟುಕೊಟ್ಟಿರುತ್ತಾರೆ . ಪಂಚನಾಮೆ ಮಾಡಿದ ಜಾಗದ ಚೆಕ್ಕುಬಂದಿ ಬರೆದಿರುತ್ತಾರೆ . ಶೋಧನಾ ಕಾರ್ಯ ಮಾಡಿದಾಗ ಯಾವುದೇ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಬಾರದಂತೆ ಕ್ರಮ ಕೈಗೊಂಡಿರುತ್ತಾರೆ . ಪಂಚನಾಮೆಯನ್ನು ಅಕ್ಕಸಾಲಿಗರ ಮತ್ತು ನಮ್ಮ ಪಂಚರ ಹಾಗೂ ಲೋಕಾಯುಕ್ತ ಅಧಿಕಾರಿ ಮತ್ತು ಸಿಬ್ಬಂದಿ ಸಮಕ್ಷಮದಲ್ಲಿ ಭಾರತಿ ಎಂಬ ಮಹಿಳಾ ಮುಖ್ಯ ಪೇದೆ ಅವರು ತಂದಿದ್ದ ಲ್ಯಾಪಟಾಪ್ ನಲ್ಲಿ ಬೆರಳಚ್ಚು ಮಾಡಿದರು . ಅಲ್ಲಿಯೇ ಅವರು ತಂದಿದ್ದ ಪ್ರಿಂಟರ್ ನಲ್ಲಿ ಅದನ್ನು ಮುದ್ರಣ ಮಾಡಿದರು . ಅದೆಲ್ಲಾ ಪ್ರಕ್ರಿಯೆ ಮುಗಿದ ಮೇಲೆ ಪುನಃ ನಮ್ಮ ಅಂಗಶೋಧನೆ ಮಾಡಿ ನಾವು ಅಲ್ಲಿಂದ ಯಾವುದೇ ವಸ್ತುಗಳನ್ನು ತೆಗೆದುಕೊಂಡು ಹೋಗಿಲ್ಲ ಎಂದು ಮನೆಯಲ್ಲಿದ್ದವರಿಗೆ ಖಾತ್ರಿ ಮಾಡಿದೆವು . ಪಂಚನಾಮೆ ಬೆಳಿಗ್ಗೆ 7.15 ರಿಂದ ಸಂಜೆ 4.15 ರವರೆಗೆ ಮಾಡಿರುತ್ತಾರೆ . ಪಂಚನಾಮೆಗೆ ನಾನು ಸಹಿ ಮಾಡಿದ್ದೇನೆ. ನಾನು

ಪಂಚ–1 ಆಗಿ ಸಹಿ ಮಾಡಿದ್ದೇನೆ. ಈಗ ಆ ಪಂಚನಾಮೆ ನೋಡಿರುತ್ತೇನೆ. ಅದರಲ್ಲಿ ನನ್ನ ಸಹಿ ಇದೆ . ಆ ಪಂಚನಾಮೆಯನ್ನು ನಿ.ಪಿ. 85 ಎಂದು ಗುರುತಿಸಲಾಯಿತು. ಅದರಲ್ಲಿ ಕೊನೆಯ ಪುಟದಲ್ಲಿ ಸಾಕ್ಷಿಯ ರುಜುವನ್ನು ನಿ.ಪಿ. 85(ಎ) ಎಂದು ಗುರುತಿಸಲಾಯಿತು. ನಾನು ಪ್ರತಿ ಪುಟದಲ್ಲಿ ಸಹಿ ಮಾಡಿದ್ದೇನೆ. ಅಕ್ಕಸಾಲಿಗರು ಸಹ ಪಂಚನಾಮೆಗೆ ರುಜು ಮಾಡಿದ್ದಾರೆ . ಆರೋಪಿಯ ಹೆಂಡತಿ ಮತ್ತು ಮಗ ಸಹ ಅದಕ್ಕೆ ರುಜು ಮಾಡಿದ್ದಾರೆ . ಆ ಪಂಚನಾಮೆಯ ಪ್ರತಿಯನ್ನು ಅವರಿಗೆ ಕೊಟ್ಟಿರುತ್ತಾರೆ . ನಾನು ಆ ಪಂಚನಾಮೆಯನ್ನು ಓದಿರುತ್ತೇನೆ. ಅದರಲ್ಲಿ ಬರೆದಿರುವುದೆಲ್ಲಾ ಸತ್ಯ ಇರುತ್ತದೆ . ಆ ಪಂಚನಾಮೆ 16 ಹಾಳೆ ಇದೆ .

14. ಮೇಲ್ಕಂಡ ಪ್ರಕ್ರಿಯೆಯಾದ ನಂತರ ನಾವು ಅಂಕೋಲಾದಲ್ರಿ ಪ್ರವಾಸಿ ಮಂದಿರದಲ್ಲಿ ತಂಗಿದೆವು . ಮಾರನೇ ದಿನ ನಾವು ಪಂಚರು ಲೋಕಾಯುಕ್ತ ಆರಕ್ಷಕ ನಿರೀಕ್ಷಕರು ಅವರ ಸಿಬ್ಬಂದಿ ಅಂಕೋಲಾದಲ್ಲಿ ಇದ್ದ ಆರೋಪಿಯ ಸಹಾಯಕ ಸಂರಕ್ಷಣಾಧಿಕಾರಿ ಕಚೇರಿಗೆ ಹೋದೆವು . ಕಚೇರಿಗೆ ಹೋದಾಗ ಅಲ್ಲಿ ಚಂದ್ರಕಾಂತ ಎಂಬ ಹೆಸರಿನ ಅಧಿಕಾರಿ ಇದ್ದರು . ಅವರಿಗೆ ನಾವು ಅಲ್ಲಿಗೆ ಬಂದ ಉದ್ದೇಶ ಹೇಳಿ ಶೋಧನಾ ವಾರೆಂಟ್ ಅನ್ನು ತನಿಖಾಧಿಕಾರಿ ತೋರಿಸಿದರು . ಆಗ ಆರೋಪಿ ಕಚೇರಿಯಲ್ಲಿ ಇರಲಿಲ್ಲ. ಅಲ್ಲಿ ಇನ್ನೊಬ್ಬ ಪ್ರಥಮ ದರ್ಜೆ ಸಹಾಯಕರು ಇದ್ದರು . ಕಚೇರಿಯ ಶೋಧನೆ ಮಾಡಿದಾಗ ಅಲ್ಲಿ ಆರೋಪಿಗೆ ಸಂಬಂಧಪಟ್ಟ ಯಾವುದೇ ವಸ್ತುಗಳು ಸಿಗಲಿಲ್ಲ. ಕಚೇರಿಯ ದಾಖಲಾತಿಗಳು ವಸ್ತುಗಳು ಮಾತ್ರ ಇದ್ದವು . ಅಲ್ಲಿ ಒಂದು ಪಂಚನಾಮೆಯನ್ನು ಮಾಡಿದರು . ಈಗ ಅದನ್ನು ನೋಡಿರುತ್ತೇನೆ. ಅದರಲ್ಲಿ ಪ್ರತಿ ಪುಟದಲ್ಲಿ ನನ್ನ ರುಜು ಇದೆ . ಅದು ನೆರಳಚ್ಚು ಪ್ರತಿ ಇರುತ್ತದೆ . ಆರೋಪಿ ಪರ ವಕೀಲರು ಶ್ರೀ ವಿ ಎನ್ ಎನ್ ರವರು ಅದನ್ನು ನಿಶಾನೆ ಮಾಡಲು ತಕರಾರು ಇಲ್ಲ ಎಂದು ಹೇಳಿದ್ದಾರೆ . ಆದ್ದರಿಂದ ಅದನ್ನು ನಿ.ಪಿ. 86 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ ಎನ್ ಎನ್ ರವರಿಂದ</u>**

15. ಪಂಚನಾಮೆಗೆ ಹಾಜರಾಗುವಂತೆ ಲಿಖಿತ ತಿಳುವಳಿಕೆ ಪತ್ರವನ್ನು ನೀಡಿದ್ದರು. ಮನೆ ಶೋಧನೆ ಮಾಡಿದಾಗ ಆ ಮನೆ ಯಾರ ಮಾಲೀಕತ್ವಕ್ಕೆ ಸೇರಿದೆ ಎಂದು ಪರಿಶೀಲಿಸಿದರಾ ಎಂದರೆ ಅದು ಆರೋಪಿಯ ಸೋದರಮಾವನಿಗೆ ಸೇರಿದೆ ಎಂದು ಮನೆಯಲ್ಲಿ ಇದ್ದವರು

ಹೇಳಿದರು. ಅಲ್ಲಿ ಇದ್ದ ವಸ್ತುಗಳ ಅಂದಾಜು ಬೆಲೆಯನ್ನು ಮನೆಯಲ್ಲಿ ಇದ್ದ ಆರೋಪಿಯ ಹೆಂಡತಿ ಮತ್ತು ಮಕ್ಕಳನ್ನು ಕೇಳಿ ಪಂಚನಾಮೆಯಲ್ಲಿ ಬರೆದಿದ್ದಾರೆ . ಆರೋಪಿಯ ಹೆಂಡತಿ ಮತ್ತು ಮಕ್ಕಳು ಯಾವುದೇ ಅಂದಾಜು ಬೆಲೆಯನ್ನು ಮತ್ತು ಅಂದಾಜು ಖರೀದಿ ವರ್ಷವನ್ನು ಹೇಳಿಲ್ಲ ಎಂದರೆ ಸರಿಯಲ್ಲ. ತನಿಖಾಧಿಕಾರಿ ಅವರ ಅನುಕೂಲಕ್ಕೆ ತಕ್ಕಂತೆ ನಮ್ಮ ಜೊತೆ ಸೇರಿ ಖರೀದಿ ವರ್ಷ ಮತ್ತು ಅಂದಾಜು ಬೆಲೆಯನ್ನು ಪಂಚನಾಮೆಯಲ್ಲಿ ಬರೆದಿದ್ದಾರೆ ಎಂದರೆ ಸರಿಯಲ್ಲ. ಅಂದಾಜು ಮೌಲ್ಯವನ್ನು ಉದ್ದೇಶಪೂರ್ವಕವಾಗಿ ಖರೀದಿ ಮೌಲ್ಯಕ್ಕಿಂತ ಹೆಚ್ಚಾಗಿ ನಮೂದಿಸಿದ್ದೇವೆ ಎಂದರೆ ಸರಿಯಲ್ಲ. ಅಕ್ಕಸಾಲಿಗರು ಅಲ್ಲಿ ಇದ್ದ ಚಿನ್ನ ಮತ್ತು ಬೆಳ್ಳಿ ಪದಾರ್ಥಗಳ ತೂಕ ಅಲ್ಲದೇ ಅವುಗಳ ಗುಣಮಟ್ಟವನ್ನು ಸಹ ಪರೀಕ್ಷೆ ಮಾಡಿದರು . ಪಂಚನಾಮೆಯಲ್ಲಿ ಗುಣಮಟ್ಟ ಪರೀಕ್ಷಿಸಿದ ಬಗ್ಗೆ ನಮೂದಿಸಿಲ್ಲ ಎಂದರೆ ನೆನಪಿಲ್ಲ ಆದರೆ ಅಲ್ಲಿ ಗುಣಮಟ್ಟ ಮತ್ತು ನೈಜತೆಯನ್ನು ಅಕ್ಕಸಾಲಿಗರು ಪರೀಕ್ಷೆ ಮಾಡಿರುತ್ತಾರೆ . ಅಕ್ಕಸಾಲಿಗರು ಪಂಚನಾಮೆಗೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ಅವರು ಯಾವುದೇ ಮೌಲ್ಯ ಮಾಪನ ಮಾಡಿಲ್ಲ ಎಂದರೆ ಸರಿಯಲ್ಲ. ತನಿಖಾಧಿಕಾರಿ ಅವರ ಅನುಕೂಲಕ್ಕೆ ತಕ್ಕಂತೆ ಮೌಲ್ಯ ಮಾಪನವನ್ನು ಬರೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಆರೋಪಿಯ ಮನೆಯಲ್ಲಿ ಸಿಟ್ ಔಟ್ ಹಾಲ್ ನಲ್ಲಿ ಬೆರಳಚ್ಚು ಮಾಡಿದರು . ಮನೆಯಲ್ಲಿ ಶೋಧನೆ ಮಾಡುವಾಗ ಟಿಪ್ಪಣಿ ಮಾಡಿಕೊಂಡು ಬಂದರು . ಒಂದೊಂದು ಕೋಣೆ ಶೋಧನೆ ಮಾಡಿ ಅಲ್ಲಿ ಇದ್ದ ವಸ್ತುಗಳ ಟಿಪ್ಪಣಿ ಮಾಡಿಕೊಂಡು ಸಿಟ್ ಔಟ್ ನಲ್ಲಿ ಬೆರಳಚ್ಚು ಮಾಡಿಸಿ ಪಂಚನಾಮೆ ಕ್ರಮ ಮಾಡಿಕೊಂಡು ಬಂದರು . ಪ್ರಿಂಟರ್ ಅನ್ನು ತನಿಖಾಧಿಕಾರಿ ಜೊತೆಯಲ್ಲಿ ತಂದಿದ್ದರು . ಅದನ್ನು ಪಂಚನಾಮೆಯಲ್ಲಿ ಬರೆದಿಲ್ಲ. ನಿ.ಪಿ. 85 ಪಂಚನಾಮೆಯಲ್ಲಿ ತನಿಖಾಧಿಕಾರಿ ವಸ್ತುಗಳ ನಿಜ ಮೌಲ್ಯಕ್ಕಿಂತ ಹೆಚ್ಚಿನ ಮೌಲ್ಯವನ್ನು ಉದ್ದೇಶಪೂರ್ವಕವಾಗಿ ನಮೂದಿಸಿರುವುದು ನನಗೆ ಗೊತ್ತಿದ್ದರೂ ತನಿಖಾಧಿಕಾರಿಗೆ ಸಹಾಯ ಮಾಡುವುದಕ್ಕಾಗಿ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ. 86 ಪಂಚನಾಮೆಯನ್ನು ಆರೋಪಿ ಕಚೇರಿಯಲ್ಲಿ ಮಾಡಿದಾಗ ಆರೋಪಿಗೆ ಸಂಬಂಧಿಸಿದ ವೈಯಕ್ತಿಕ ವಸ್ತು ಯಾವುದೇ ಸಿಕ್ಕಿರುವುದಿಲ್ಲ. ನಿ.ಪಿ. 85 ಪಂಚನಾಮೆಯಲ್ಲಿ ಹೇಳಿರುವ ವಸ್ತುಗಳು ಯಾವ ಸ್ಥಿತಿಯಲ್ಲಿ ಇದ್ದವು ಎಂದು ಪಂಚನಾಮೆಯಲ್ಲಿ ಹೇಳಿಲ್ಲ ಎಂದರೆ ಹೌದು ಆದರೆ ಅವುಗಳ ಮೌಲ್ಯ ಮತ್ತು ಖರೀದಿ ವರ್ಷ ಮಾತ್ರ ಬರೆದಿದ್ದಾರೆ .

**<u>ಮರು ವಿಚಾರಣೆಃ – ಇಲ್ಲ –</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ